ದಿನಾಂಕ: 04.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ಶ್ರೀ ಜಿ ಎಸ್ ಕೆ ವಕೀಲರಿಂದಃ

ನಾನು ಶೇತ್ಕಿ ಕೆಲಸ ಮಾಡುತ್ತೇನೆ. ನನಗೆ 9 ಎಕರೆ ಕೃಷಿ ಜಮೀನು ಇದೆ. ಸದರಿ ಜಮೀನು ನನ್ನ ತಂದೆ ಹೆಸರಿನಲ್ಲಿದೆ. ನನ್ನ ತಂದೆ ತೀರಿಕೊಂಡಿದ್ದು ಸದರಿ ಜಮೀನು ನನಗೆ ಹಾಗೂ ನನ್ನ 2 ಜನ ಸಹೋದರರಿಗೆ ವಾರಸಾ ಮುಖಾಂತರ ಬಂದಿದೆ. ನಾನು 2002 ರಿಂದ 2024 ರವರೆಗೆ ಬೆಂಗಳೂರಿನಲ್ಲಿ ಒಂದು ಗಾರ್ಮೆಂಟ್ಸನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಬೆಂಗಳೂರಿನ ಲಕ್ಷ್ಮೀ ಗಾರ್ಮೆಂಟ್ಸನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಬೆಂಳೂರಿನಲ್ಲಿ ನನ್ನ ಸ್ನೇಹಿತನ ಮನೆಯಲ್ಲಿ ಬಾಡಿಗೆಯಿಂದ ವಾಸವಾಗಿದ್ದೆ. ಸದರಿ ಗಾರ್ಮೆಂಟ್ಸಗೆ ನಾನು ಬೆಳಿಗ್ಗೆ 8.00 ಗಂಟೆಗೆ ಹೋದರೆ ಸಂಜೆ 5.00 ರವರೆಗೆ ಕೆಲಸ ಇರುತ್ತಿತ್ತು. ಸದರಿ ಲಕ್ಷ್ಮೀ ಗಾರ್ಮೆಂಟ್ಸನಲ್ಲಿ ಕೆಲಸ ಮಾಡುವವರಿಗೆ ಗುರುತಿನ ಚೀಟಿ ನೀಡುತ್ತಾರೆ ಎಂದರೆ ಸರಿ. ಸದರಿ ನಾನು ಲಕ್ಷ್ಮೀ ಗಾರ್ಮೆಂಟ್ಸನಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಗುರುತಿನ ಚೀಟಿ ಹೊಂದಿರಲಿಲ್ಲ. ಸದರಿ ನನ್ನ ಜೊತೆ 25-30 ಜನ ಸದರಿ ಗಾರ್ಮೆಂಟ್ಸನಲ್ಲಿ ಸದರಿ ಸಮಯದಲ್ಲಿ ಕೆಲಸ ಮಾಡುತ್ತಿದ್ದು ಅವರಾರಿಗೂ ಸಹ ಗುರುತಿನ ಚೀಟಿ ಇರಲಿಲ್ಲ. ಸದರಿ ಯಾರಿಗೂ ಸಹ ಗುರುತಿನ ಚೀಟಿ ಇರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಸದರಿ ಲಕ್ಷ್ಮೀ ಗಾರ್ಮೆಂಟ್ಸನಲ್ಲಿ ತಿಂಗಳಿಗೆ 18 ಸಾವಿರ ಸಂಬಳ ಇತ್ತು. ಸದರಿ ಸಂಬಳದಲ್ಲಿ ಪಿ ಎಫ್ ಹಾಗೂ ಇ ಎಸ್ ಐ ಕಡಿತವಾಗಿ ನನಗೆ ನಿವ್ವಳ 16 ಸಾವಿರ ರೂಪಾಯಿ ಸಂಬಳ ಬರುತ್ತಿತ್ತು. ಸದರಿ ಸಂಬಳವನ್ನು ನನಗೆ ಕೈಯಲ್ಲಿ ನೀಡುತ್ತಿದ್ದರು ಬ್ಯಾಂಕಖಾತೆಗೆ ಜಮೆ ಮಾಡುತ್ತಿರಲಿಲ್ಲ. ಸದರಿ ಸಮಯದಲ್ಲಿ ನಾನು ಬ್ಯಾಂಕ ಖಾತೆ ಹೊಂದಿದ್ದೆ. ನಾನು ಬೆಂಗಳೂರಿನಲ್ಲಿ ಯಾವುದೇ ಬ್ಯಾಂಕ ಖಾತೆ ಹೊಂದಿರಲಿಲ್ಲ ಸಾಕ್ಷಿ ಮುಂದುವರೆದು ಅಕ್ಕಿಆಲೂರಿನ ಕೆನರಾ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದೇನೆ ಎನ್ನುತ್ತಾರೆ. ಸದರಿ ಲಕ್ಷ್ಮೀ ಗಾರ್ಮೆಂಟ್ಸನಲ್ಲಿ ನನಗೆ ತಿಂಗಳಿಗೆ ಸಂಬಳ ಸಂದಾಯ ಆದ ಬಗ್ಗೆ ರಿಜಿಸ್ಟರನಲ್ಲಿ ಸಹಿ ಪಡೆಯುತ್ತಿದ್ದರು. ಅದೇ ರೀತಿ ನಾನು ನನ್ನ ತಿಂಗಳ ವೇತನವನ್ನು ಪಡೆಯುತ್ತಿದ್ದೆ. ಸದರಿ ರಿಜಿಸ್ಟರನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

3. ನಾನು ಬೆಂಗಳೂರಿನ ಗಾರ್ಮೆಂಟ್ಸನಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಲಕ್ಷ್ಮೀ ಗಾರ್ಮೆಂಟ್ಸ ಬೆಂಗಳೂರಿನ ಮೂಡಣ ಪಾಳ್ಯದ ಗಣೇಶ ನಗರದ 6 ನೇ ಕ್ರಾಸ್ ನಲ್ಲಿದೆ. ಸದರಿ ವಿಳಾಸದಲ್ಲಿ ನಾನು ಕೆಲಸಕ್ಕೆ ಇದ್ದೆ ಎಂದು ನನ್ನ ದೂರಿನಲ್ಲಿ ನಮೂದಿಸಿಲ್ಲ. ಆ ಬಗ್ಗೆ ದೂರನಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ನಾನು ಬೆಂಗಳೂರಿನಲ್ಲಿ ಕುಮಾರ ಎಂಬುವವರ ಕಾರ್ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

4. 2024 ನೇ ಸಾಲಿನಲ್ಲಿ ನಮ್ಮ ಕುಟುಂಬದ ಜಮೀನಿನಲ್ಲಿ 6 ಎಕರೆಯಲ್ಲಿ ಅಡಿಕೆ ತೋಟ, 3 ಎಕರೆಯಲ್ಲಿ ಮೆಕ್ಕೆಜೋಳ ಬೆಳೆದಿದ್ದೇವು. ಸದರಿ ಸಾಲಿನಲ್ಲಿ ನಾವು 3 ಎಕರೆಯಲ್ಲಿ ಮೆಕ್ಕೆಜೋಳ ಬೆಳೆದಿದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಮಗೆ 9 ಎಕರೆ ಜಮೀನು ಇದೆ ಎಂದು ತೋರಿಸಿರುವ ಉತಾರೆ ಹಾಜರುಪಡಿಸಿಲ್ಲ. ನನ್ನ ಹೆಸರಿಗೆ ಯಾವುದೇ ಜಮೀನು ಇಲ್ಲದೇ ಇರುವುದರಿಂದ ಹಾಗೂ ನಾನು ಯಾವುದೇ ಬೆಳೆ ಬೆಳೆಯದೇ ಇರುವುದರಿಂದ ನಾನು ಯಾವುದೇ ಉತಾರೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಉತಾರಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ.

5. ನಮ್ಮ ಜಮೀನಿನಲ್ಲಿ ಬೆಳೆದ ಅಡಿಕೆ ಬೆಳೆ ಹಾಗೂ ಗೋವಿನಜೋಳವನ್ನು ಮಾರುಕಟ್ಟೆಗೂ ಸಾಗಿಸುತ್ತೇವೆ ಹಾಗೂ ಜಮೀನಿಗೂ ಸಹ ಕ್ರಯದಾರರು ಬಂದು ಖರೀದಿಸಿಕೊಂಡು ಹೋಗುತ್ತಾರೆ. ಸದರಿ ಕ್ರಯದ ಹಣವನ್ನು ನಮ್ಮ ಖಾತೆಗೆ ಜಮೆ ಮಾಡುತ್ತಾರೆ ಎಂದರೆ ಸರಿ. ಆರೋಪಿಗೆ ಸದರಿ ದೂರಿನಲ್ಲಿ ನಮೂದಿಸಿದ ಹಣವನ್ನು ನಗದು ರೂಪದಲ್ಲಿ ನೀಡಿದ್ದೆ. ಸದರಿ ಹಣ ನನ್ನ ಮನೆಯಲ್ಲಿ ಇತ್ತು. ಸದರಿ ಹಣ ನನ್ನ ಮನೆಯಲ್ಲಿ ಸ್ಟಾಕ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಆರೋಪಿ ಮೂಲತಃ ಬೆಂಗಳೂರಿನಲ್ಲಿ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಾನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸದರಿ ಲಕ್ಷ್ಮೀ ಗಾರ್ಮೆಂಟ್ಸನಲ್ಲಿ ನಮ್ಮ ಜೊತೆ ಕೆಲಸ ಮಾಡುತ್ತಿದ್ದ ಎನ್ನುತ್ತಾರೆ. ದೂರಿನಲ್ಲಿ ನಾನು ಆರೋಪಿಯ ಉದ್ಯೋಗ ಕ್ಯಾಬ ಡ್ರೈವರ ಎಂದು ಬರೆಸಿರುತ್ತೇನೆ ಎಂದರೆ ಸರಿ. ಆರೋಪಿ ಕ್ಯಾಬ ಡ್ರೈವರ ಆದ್ದರಿಂದ ಬೆಳಿಗ್ಗೆ ಹೋಗಿ ತಡರಾತ್ರಿ ಮನೆಗೆ ಬರುವ ಹಾಗೂ ಕೆಲವೊಂದು ಬಾರಿ 2-3 ದಿನ ಮನೆಯಿಂದ ಹೊರಗಡೆ ಹೋಗುವ ಪ್ರಸಂಗ ಬರುತ್ತದೆ ಎಂದರೆ ಸರಿ. ಆರೋಪಿ ತನ್ನ ಅತ್ತೆಯಾದ ಶಾಂತಮ್ಮ ರವರ ಮುಖಾಂತರ ಕುಮಾರ ಎಂಬುವವರ ಬಳಿಯಿಂದ ಸದರಿ ನಿಪಿ-1 ಚೆಕ್ ಮತ್ತು ಆತನ ಬೈಕನ್ನು ಒತ್ತೆ ಇಟ್ಟು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಲ ಪಡೆದಿದ್ದು ಸದರಿ ಚೆಕ್ಕನ್ನು ನಾನು ಕುಮಾರ ಎಂಬುವವರಿಂದ ಪಡೆದು

ಅದನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಹಿರಿಯಪ್ಪ ನಾಗೇಂದ್ರಪ್ಪ ಮಾಕೊಪ್ಪದರವರು ಶೋಭಾ ನಂಜುಂಡಪ್ಪ ರವರ ವಿರುದ್ಧ ಸಿಸಿ ನಂ. 764/2024 ಹಾಗೂ ಸಿದ್ದರಾಜು ತಂದೆ ಲಿಂಗಯ್ಯ ರವರ ವಿರುದ್ಧ ಸಿಸಿ ನಂ. 757/2024 ನೇದ್ದನ್ನು ದಾಖಲಿಸಿದ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿ. ಅದೇರೀತಿ ನನಗೂ ಸಹ ಸದರಿ ಕುಮಾರ ರವರು ಸದರಿ ಈ ಪ್ರಕರಣದ ಚೆಕ್ ನೀಡಿ ಅವರ ಹೇಳಿಕೆ ಮೇರೆಗೆ ನಾನು ಸದರಿ ಈ ಸುಳ್ಳು ಪ್ರಕರಣವನ್ನು ಆರೋಪಿ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯಸ್ಥನಲ್ಲ ಎಂದರೆ ಸರಿಯಲ್ಲ. ನಾನು ಯಾರು ಎಂದು ಆತನಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

7. 2024 ರ ಜನೇವರಿ 2 ನೇ ವಾರದಲ್ಲಿ ಆರೋಪಿಗೆ ಹಣವನ್ನು ನೀಡಿದ್ದೆ ಎಂದು ನನ್ನ ದೂರಿನಲ್ಲಿ ಬರೆಯಿಸಿದ್ದು ಆ ಬಗ್ಗೆ ಪತ್ರ ವ್ಯವಹಾರ ಸದರಿ ದಿನ ಮಾಡಲಿಲ್ಲ. ಸದರಿ ಆರೋಪಿಗೆ ದೊಡ್ಡ ಮೊತ್ತ ರೂ.4,50,000/-ನೀಡಿದ್ದೇನೆ ಎಂದು ದೂರಿನಲ್ಲಿ ಬರೆಯಿಸಿದ್ದು ಅದಕ್ಕೆ ಸಂಬಂಧಿಸಿದಂತೆ ಪತ್ರ ಬರೆಯಿಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ. ಸದರಿ ನನ್ನ ಹಾಗೂ ಆರೋಪಿ ಮಧ್ಯ ಯಾವುದೇ ವ್ಯವಹಾರ ನಡೆಯದೇ ಇದ್ದುದ್ದರಿಂದ ನಾನು ಆತನಿಂದ ಯಾವುದೇ ಪತ್ರ ಬರೆಯಿಸಿಕೊಂಡಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಆತನಿಂದ ಚೆಕ್ ಪಡೆದು ಹಣ ನೀಡಿರುತ್ತೇನೆ ಎನ್ನುತ್ತಾರೆ. ನಾನು ಹಣ ನೀಡಿದ ದಿನದಂದೇ ಆತ ನನಗೆ ಚೆಕ್ ನೀಡಿದ್ದ. ಆರೋಪಿ ನನಗೆ ಯಾವುದೇ ಚೆಕ್ ನೀಡಿಲ್ಲ ಹಾಗೂ ನನ್ನ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ, ನಾನು ಆತನ ವಿರುದ್ಧ ಖೊಟ್ಟಿಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

8. ನಿಪಿ-1 ರಲ್ಲಿ ಬರೆದ ಬರವಣಿಗೆ ಆರೋಪಿಯದ್ದು ಅಲ್ಲ ಎಂದರೆ ಸರಿಯಲ್ಲ. ಆರೋಪಿ ಸದರಿ ನಿಪಿ-1 ರಲ್ಲಿ ಬರೆದಿರುವ ಹಾಗೆ ಬರೆದುಕೊಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸದರಿ ಕುಮಾರ ರವರ ಬಳಿ ಇದ್ದ ಖಾಲಿ ಚೆಕ್ಕನ್ನು ನಾನು ಪಡೆದು ನನ್ನ ಮನಸ್ಸಿಗೆ ಬಂದಂತೆ ಅಂಕಿ ಸಂಖ್ಯೆಗಳನ್ನು ಬರೆದುಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಗಾರ್ಮೆಂಟ್ಸನಲ್ಲಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ ಆರೋಪಿ ಸಹ ಯಾವುದೇ ಗಾರ್ಮೆಂಟ್ಸನಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯಸ್ಥನಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನಿಂದ ಹಣ ಕಬಳಿಸುವ ಉದ್ದೇಶದಿಂದ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ಇಲ್ಲದೇ ಇದ್ದರೂ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

C/C 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ ಎಂ ಎಫ್ ಸಿ ಹಾನಗಲ್